ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಲಕ್ಷ ರೂಪಾಯಿ ಸಿಕ್ಕಿದೆ. ಕೆಲಸ ಸಿಕ್ಕಿರುವುದು ಅದೆಲ್ಲ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇಲ್ಲಿರುವ ಮಾಹಿತಿ ಪ್ರಕಾರ ಅವರು ಹೇಳಿದ್ದಾರೆ. ಒಂದು ವೇಳೆ ಇಲ್ಲ ಎಂದರೆ ಖಂಡಿತವಾಗಿ verify ಮಾಡಿಸಿ ಕೊಡಿಸತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

: 2584

: ಶ್ರೀ ತಿಮ್ಮರಾಯಪ್ಪ. ಕೆ. ಎಂ. (ಪಾವಗಡ)

: ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಪಾವಗಡ ವೆಂಕಟಮ್ಮನಹಳ್ಳಿ ಘಟನೆಗೆ ಮುಂಚೆ ನಕ್ಸಲೀಯ ಪ್ರದೇಶಗಳಲ್ಲಿ ವಿಶೇಷ ಕ್ರಿಯಾ ಯೋಜನೆಗಳನ್ನು ಉಡುಪಿ, ಚಿಕ್ಕಮಗಳೂರು ಗಳಿಗೆ ಮಾತ್ರ ಸೀಮಿತ ಗೊಳಿಸಲು ಕಾರಣವೇನು ?	ಮಲೆನಾಡಿನ ಭಾಗವಾದ ಚಿಕ್ಕಮಗಳೂರು ಜಿಲ್ಲೆಯ ಕುದುರೆ ಮುಖ ರಾಷ್ಟ್ರೀಯ ಉದ್ಯಾನವನದಿಂದ ಹೊರಬರಲು ಇಚ್ಛಿಸುವ ಗಿರಿಜನ ಕುಟುಂಬಗಳ ಪುನರ್ವಸತಿಗಾಗಿ ಅರಣ್ಯ ಇಲಾಖೆ ಅಭಿವೃದ್ಧಿ ಪ್ರಸ್ತಾವನೆ ಯೊಂದನ್ನು ತಯಾರಿಸಿದ್ದು, ಇದರ ವೆಚ್ಚ ರೂ. 60 ಕೋಟಿ ಎಂದು ಅಂದಾಜಿಸ ಲಾಗಿತ್ತು. ಇದರ ಮೊದಲನೇ ಹಂತಕ್ಕಾಗಿ ರೂ. 23 ಕೋಟಿಗಳ ವಿವರ ಅಂದಾಜು ತಯಾರಿಸಿ, ಈ ಪ್ರಸ್ತಾವನೆಯನ್ನು ರಾಜ್ಯದ ಅರಣ್ಯ ಇಲಾಖೆಯಿಂದ ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯಕ್ಕೆ ಅನು ಮೋದನೆಗಾಗಿ ಕಳುಹಿಸಲಾಗಿದೆ. ಮಂಜೂ ರಾತಿ ನಿರೀಕ್ಷಿಸಲಾಗಿದೆ.ಅಭಿವೃದ್ಧಿ ಆಯುಕ್ತ ರಾದ ಶ್ರೀ ಚಿರಂಜೀವಿ ಸಿಂಗ್ ನೇತೃತ್ವದ ತಂಡ ಸಮಗ್ರ ಅಧ್ಯಯನ ನಡೆಸಿಈಗ ತಾನೇ ವರದಿ ಸಲ್ಲಿಸಿದೆ. ರಾಜ್ಯದಲ್ಲಿ ನಕ್ಸಲೀಯರಿಂದ ಪೀಡಿತವಾದ ಎಲ್ಲಾ ಭಾಗಗಳ ಅಭಿವೃದ್ಧಿಗಾಗಿ,
ಆ)	ಪಾವಗಡ ತಾಲೂಕಿನಲ್ಲಿ ಸುಮಾರು 1989 ರಿಂದಲೂ ನಕ್ಸಲೀಯ ಚಟುವಟಿಕೆಗಳು ಕಾಣಿಸಿಕೊಂಡಿದ್ದರೂ ಕ್ರಿಯಾ ಯೋಜನೆಯನ್ನು ಕೈ ಬಿಡುವ ಕಾರಣವೇನು;	

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
		ಸಂಬಂಧಪಟ್ಟ ಅಭಿವೃದ್ಧಿ ಇಲಾಖೆಗಳೊಂದಿಗೆ ಸಮಗ್ರವಾಗಿ ಚರ್ಚಿಸಿ, ಕಾರ್ಯಕ್ರಮ ರೂಪಿಸಲಾಗುತ್ತಿದೆ. ಈ ಯೋಜನೆಯಿಂದ ಪಾವಗಡವನ್ನು ಹೊರತುಪಡಿಸುವ ಯಾವುದೇ ಉದ್ದೇಶ ಸರ್ಕಾರಕ್ಕಿಲ್ಲ. ಪಾವಗಡ ತಾಲ್ಲೂಕು ಒಳಗೊಂಡಂತೆ ನಕ್ಸಲ್ ಪೀಡಿತ ಪ್ರದೇಶಗಳ ಅಭಿವೃದ್ಧಿ, ಸರ್ಕಾರದ ಆದ್ಯತೆ. ಈ ಬಗ್ಗೆ ಸಮಗ್ರ ಯೋಜನೆಯೊಂದನ್ನು ತಯಾರಿಸಿ, ಈ ಭಾಗದ ಜನತೆಯ ಸಮಸ್ಯೆಗಳನ್ನು ನಿವಾರಿಸಲು, ಅಗತ್ಯ ಹಣಕಾಸಿನ ಅನುಕೂಲತೆಗಳನ್ನು ಒದಗಿಸಿಕೊಂಡು, ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತದೆ.
ಇ)	ಈಗಲಾದರೂ ಸರ್ಕಾರ ವಿಶೇಷ ಕಾರ್ಯಕ್ರಮಗಳನ್ನು ಜಾರಿ ಮಾಡಲಾಗುವುದೆ ?	

ಶ್ರೀ ಕೆ. ಎಂ. ತಿಮ್ಮರಾಯಪ್ಪ : ಮಾನ್ಯ ಅಧ್ಯಕ್ಷರೇ, ಉತ್ತರ ಬಂದಿದೆ. ಪಾವಗಡ ತಾಲ್ಲೂಕಿನಲ್ಲಿ ಸುಮಾರು ವರ್ಷಗಳಿಂದ ನಕ್ಸಲೀಯ ಚಟುವಟಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಎರಡು ವರ್ಷ ಮೂರು ವರ್ಷಗಳ ಹಿಂದೆ ನಮ್ಮ ಪಶ್ಚಿಮ ಘಟ್ಟಗಳಲ್ಲಿ ನಡೆಯತಕ್ಕಂಥ ನಕ್ಸಲೀಯ ಚಳುವಳಿ ಏನು ಅಲ್ಲಿ ನಡೆಯುತ್ತಿದೆ. ಅಂತಹ ಒಂದು ಪ್ರದೇಶವನ್ನು ಅವರು ಗಮನಿಸಿ ಅಲ್ಲಿ ಕ್ರಿಯಾಯೋಜನೆಯನ್ನು ತಯಾರು ಮಾಡಲಿಕ್ಕೆ ಹೊರಟಿದ್ದಾರೆ. 1989 ರಿಂದ ಸಕ್ರಿಯವಾಗಿ ನನ್ನ ತಾಲೂಕಿನಲ್ಲಿ ಅನೇಕ ನಕ್ಸಲೀಯ ಘಟನೆಗಳು, ಅದರಲ್ಲಿ ಹೊಸದುರ್ಗದ ಒಬ್ಬ ರೈತನ ಕಗ್ಗೊಲೆ ಆಯಿತು. ಸೂಲನಾಯಕನ ಹಳ್ಳಿಯಲ್ಲಿ ಇಡೀ ದೇಶವೇ ಕಣ್ತೆರೆದು ನೋಡತಕ್ಕಂಥ ಒಂದು ಘಟನೆ ನಡೆದು ಹೋಯಿತು. ನಮ್ಮ ತಾಲೂಕಿನಲ್ಲಿ ಇಂಥ ಘಟನೆಗಳು ಅನೇಕ ನಡೆದು ಹೋದವು. ಇಂಥ ಒಂದು ತಾಲೂಕಿನಲ್ಲಿ ಅತಿ ಸೂಕ್ಷ್ಮತೆಯಿಂದ ಇರುವ ಜನರ ಮಧ್ಯೆ ಅನೇಕ ಸೌಲಭ್ಯಗಳಿಂದ ವಂಚಿತರಾಗಿರುವ ಆ ಒಂದು ಭಾಗದಲ್ಲಿ ಸರ್ಕಾರದ ಗಮನಕ್ಕೆ

ಏಕೆ ಬರಲಿಲ್ಲ? 1989 ರಿಂದೀಚೆಗೆ ಸುಮಾರು 16 ವರ್ಷಗಳಾದರೂ ಸಹ ಅನೇಕ ಕಾರ್ಯಕ್ರಮಗಳನ್ನು ಅಲ್ಲಿ ಮಾಡಬೇಕಾಗಿತ್ತು. ನಮ್ಮ ಪಾವಗಡ ತಾಲ್ಲೂಕನ್ನು ಈ ಸರ್ಕಾರ ಮತ್ತು ಹಿಂದಿನ ಸರ್ಕಾರ ಮರೆತಿದಿದೆಯೇ? ಕ್ರಿಯಾ ಯೋಜನೆಗಳ ಮೂಲಕ ಆ ಭಾಗದಲ್ಲಿ ಆಗುತ್ತಿರುವ ಕೆಲಸ ಕಾರ್ಯಗಳ ಬಗ್ಗೆ ಏಕೆ ಗಮನಿಸಲಿಲ್ಲ? ವೆಂಕಟಮ್ಮನಹಳ್ಳಿಯಲ್ಲಿ ನಡೆದ ಘಟನೆಯಿಂದೀಚೆಗೆ ಅಲ್ಲಿಗೆ ಕೆಲವು ಕಾರ್ಯಕ್ರಮಗಳನ್ನು ಕೊಡುತ್ತೇವೆಂದು ಈಗ ತಾನೆ ಸರ್ಕಾರದ ಕಡೆಯಿಂದ ಹೇಳುತ್ತಿದ್ದಾರೆ. ಹಿಂದೆಲ್ಲ ನಮ್ಮ ಭಾಗದ ಜನರನ್ನು ಏಕೆ ಕಡೆಗಾಣಿಸುತ್ತಾ ಬಂದರು ಎಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಾರಿಗೆ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ಪಾವಗಡದಲ್ಲಿ ವೆಂಕಟಮ್ಮನಹಳ್ಳಿ ಘಟನೆ ಆದ ಮೇಲೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದರೆ ಮಲೆನಾಡಿನಲ್ಲಿ ವಿಶೇಷವಾಗಿ ಚಿಕ್ಕಮಗಳೂರು ಜಿಲ್ಲೆಗೆ ತಾವು ಹೆಚ್ಚಿನ ಆಸಕ್ತಿಯನ್ನು ತೋರಿಸಿ ಅಲ್ಲಿ ಅಭಿವೃದ್ಧಿ ಕೆಲಸವನ್ನು ತೆಗೆದುಕೊಂಡಿದ್ದಿರಿ. ಪಾವಗಡಕ್ಕೆ ತಾವು ನಿರ್ಲಕ್ಷ್ಯ ಮಾಡಿದ್ದೀರಿ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಸತ್ಯಕ್ಕೆ ದೂರವಾದಂತದ್ದು, ಚಿಕ್ಕಮಗಳೂರಿನಲ್ಲಿ ಈಗ ಕುದುರೆ ಮುಖ ರಾಷ್ಟ್ರೀಯ ಉದ್ಯಾನವನದಿಂದ ಅಲ್ಲಿ ಒಳಗಡೆ ಇರತಕ್ಕಂಥವರಿಗೆ ಆ scheduled tribe ಜನಾಂಗದವರಿಗೆ ಹೊರಗಡೆ ತರುವುದಕ್ಕೋಸ್ಕರ ಒಂದು package ಅನ್ನು ಮಾಡಿದ್ದೆವು.

23 ಕೋಟಿ ರೂಪಾಯಿಗಳ ಪ್ಯಾಕೇಜ್ ಅನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ನಾವು ಅರ್ಧ ಭಾಗ, ಅರ್ಧ ಭಾಗದಷ್ಟು ಕೇಂದ್ರ ಸರ್ಕಾರ ಹಾಕಿ ಅಲ್ಲಿರುವ ಪರಿಶಿಷ್ಟ ಪಂಗಡದವರಿಗೆ ಒಂದು ವಸತಿ ಸೌಕರ್ಯವನ್ನು ಮಾಡಿಕೊಡಬೇಕು. ಅವರಿಗೆ ರೀಹ್ಯಾಬಿಲಿಟೇಷನ್ ಪ್ರೋಗ್ರಾಂ ಮಾಡಿಕೊಡಬೇಕೆನ್ನುವ ದೃಷ್ಟಿಯಿಂದ ಮಾಡಿದ್ದೇ ಹೊರತಾಗಿ ಪಾವಗಡಕ್ಕೆ ಅಭಿವೃದ್ಧಿ ಕೆಲಸವನ್ನು ನಿಲ್ಲಿಸಬೇಕು. ನಿರ್ಲಕ್ಷ್ಯ ಮಾಡಬೇಕೆನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ. ಪಾವಗಡವೂ ಮುಖ್ಯ ಮತ್ತು ನಕ್ಸಲೈಟ್ಸ್ ಅಫೆಕ್ಟೆಡ್ ಏರಿಯಾಸ್ ಏನಿವೆ ವಿಶೇಷವಾಗಿ ಆಂಧ್ರದ ಬಾರ್ಡರ್‌ನಲ್ಲಿರುವ ಊರುಗಳಿರಬಹುದು, ಬೀದರಿನಿಂದ ಕೋಲಾರದವರೆಗೆ, ಕೋಲಾರ ಇರಬಹುದು, ತುಮಕೂರು ಇರಬಹುದು, ಚಿತ್ರದುರ್ಗ ಇರಬಹುದು, ಬಳ್ಳಾರಿ ಇರಬಹುದು, ರಾಯಚೂರು ಇರಬಹುದು, ಬೀದರ್ ಇರಬಹುದು, ಇವೆಲ್ಲ ಭಾಗವನ್ನೂ ಕೂಡ ಏನು ಆಂಧ್ರಕ್ಕೆ ಹತ್ತಿರವಿದೆ. ಆ ಎಲ್ಲಾ ಭಾಗದಲ್ಲೂ ಕೂಡ ಅಭಿವೃದ್ಧಿ ಕೆಲಸವನ್ನು ತೆಗೆದುಕೊಳ್ಳ ಬೇಕು ಅನ್ನತಕ್ಕಂಥದ್ದು ಸರ್ಕಾರದ ಗಮನದಲ್ಲಿದೆ. ಅಭಿವೃದ್ಧಿ ಬಗ್ಗೆ ಡೆವಲಪ್‌ಮೆಂಟ್ ಕಮಿಷನರ್‌ರವರು ಈಗಾಗಲೇ ಚಿಂತನೆ ಮಾಡುತ್ತಿದ್ದಾರೆ. ಅಲ್ಲಿ

ಮೂಲ ಭೂತ ಸೌಕರ್ಯ ರಸ್ತೆಗಳು, ಕುಡಿಯುವ ನೀರು, ಶಾಲೆ, ಬೋರ್‌ವೆಲ್ಸ್, ಗಂಗಾ ಕಲ್ಯಾಣ ಯೋಜನೆ, ಸಣ್ಣ ನೀರಾವರಿ ಇಂಥವೆಲ್ಲ ಯೋಜನೆಗಳನ್ನು ರೂಪಿಸಿ, ವಾಟರ್‌ಷೆಡ್ ಪ್ರೋಗ್ರಾಂ ಇಂಥವೆಲ್ಲಾ ಕೊಟ್ಟು ಆ ಭಾಗದ ಅಭಿವೃದ್ಧಿ ಮಾಡಬೇಕೆನ್ನುವುದಿದೆ. ಪಾವಗಡದಲ್ಲೂ ಕೂಡ ಈಗಾಗಲೇ ಸಾಕಷ್ಟು ವಾಟರ್ ಷೆಡ್ ಪ್ರೋಗ್ರಾಂಗಳು ಸಣ್ಣ ನೀರಾವರಿ ಯೋಜನೆಯಲ್ಲಿ ಹೋದ ಸಲ ಕೂಡ ಕಾರ್ಯಕ್ರಮ ಹಾಕಿಕೊಂಡಿದೆ. ಈ ಸಾರಿಯೂ ಕೂಡ ಅದನ್ನು ಗಮನದಲ್ಲಿಟ್ಟು ಕೊಂಡು ಆ ಭಾಗವನ್ನು ಅಭಿವೃದ್ಧಿಪಡಿಸುವುದಕ್ಕೆ ಏನೇನು ಕೆಲಸವನ್ನು ಮಾಡಬೇಕು ಆ ಕೆಲಸವನ್ನು ಸರ್ಕಾರ ಮಾಡುತ್ತದೆ. ಏಕೆಂದರೆ, ಇದು ಪಾವಗಡದ ಒಂದೇ ಪ್ರಶ್ನೆ ಅಲ್ಲ. ನಾವು ಶಾಂತಿಯನ್ನು ಕಾಪಾಡಬೇಕು, ಕಾನೂನು ವ್ಯವಸ್ಥೆಯನ್ನು ಸರಿಯಾಗಿ ನಮ್ಮ ರಾಜ್ಯದಲ್ಲಿ ಇಟ್ಟುಕೊಳ್ಳಬೇಕಾದರೆ, ಈ ನಕ್ಸಲೈಟ್ಸ್ ಅಫೆಕ್ಟೆಡ್ ಏರಿಯಾ ಏನಿದೆ, ಆ ಏರಿಯಾದಲ್ಲಿ ಆ ಭಾಗದಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸ ಮಾಡುವಂಥ ಅವಶ್ಯಕತೆ ಇದೆ. ಸರ್ಕಾರ ಮನಗಂಡಿದೆ. ಆ ದಿಕ್ಕಿನಲ್ಲಿ ಕೆಲಸವನ್ನು ಮಾಡುತ್ತೇವೆ ಅನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಕೆ. ಎಂ. ತಿಮ್ಮರಾಯಪ್ಪ :– ಪಾವಗಡಕ್ಕೆ ಕ್ರಿಯಾ ಯೋಜನೆಯನ್ನು ರೂಪಿಸುತ್ತೇವೆ. ಅಭಿವೃದ್ಧಿ ಕಾರ್ಯ ಮಾಡುತ್ತೇವೆಂದು ನಮ್ಮ ಸಚಿವರೇನು ಉತ್ತರ ಕೊಡುತ್ತಿದ್ದಾರೆ, ಈಗ ನಮಗೆ ಆ ಉತ್ತರದಿಂದ ಅತೀ ಜರೂರಾಗಿ ವಿಷಯಗಳು ಅನೇಕವಿದೆ. ಅಲ್ಲಿ ಕುಡಿಯುವ ನೀರಿನ ಸಮಸ್ಯೆ ತುಂಬಾ ತೀವ್ರವಾಗಿ ಅಲ್ಲಿ ಸುಮಾರು 10 ಸಾವಿರ ಪಡಿತರ ಚೀಟಿಗಳು ಬರಬೇಕು. ಸೂಕ್ಷ್ಮವಾದ ಪ್ರದೇಶದಲ್ಲಿ ಸುಮಾರು 2 ವರ್ಷಗಳಿಂದ ಅಲ್ಲಿ ಹಳದಿ ಪಡಿತರ ಚೀಟಿಗಳು ಅರ್ಹ ಫಲಾನುಭವಿಗಳಿಗೆ ಲಭ್ಯ ವಾಗಿಲ್ಲ. ಕುಡಿಯುವ ನೀರಿನ ಸಮಸ್ಯೆಗೆ ನಾವು ಕೋಟ್ಯಾಂತರ ರೂಪಾಯಿಗಳನ್ನು ಅಂದರೆ, ಸುಮಾರು 2 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರವನ್ನು ಕೇಳಿದ್ದೇವೆ. ಕೇವಲ 15–20 ಲಕ್ಷ ರೂಪಾಯಿಗಳನ್ನು ನಾವು ಕೊಡುತ್ತೇವೆಂದು ಹೇಳುತ್ತಿದ್ದಾರೆ. ನನ್ನ ಎಲ್ಲ ತಾಲ್ಲೂಕಿನಲ್ಲಿ ಸುಮಾರು 279 ಕಿರು ನೀರು ಕೊಳವೆ ಬಾವಿಗಳು ಬತ್ತಿ ಹೋಗಿವೆ. 780 ಎಲ್ಲಾ ಕೊಳವೆ ಬಾವಿಗಳು ಬತ್ತಿ ಹೋಗಿವೆ. ಕೊಳವೆ ಬಾವಿ ಕೊರೆಯಲು ನಮಗೆ ಇವತ್ತು ಹಣ ಕೊಡುತ್ತಿದ್ದಾರೆ. ಈಗಾಗಲೇ ನಾವು ಸುಮಾರು 100 ಕೊಳವೆ ಬಾವಿಗಳನ್ನು ಕೊರೆಸಿದ್ದೇವೆ. ಇನ್ನೂ ಅನೇಕ ಕೊಳವೆ ಬಾವಿಗಳನ್ನು ಕೊರೆಯುವುದರ ಜೊತೆಗೆ ನೀರಿನ ಸ್ಥಾವರಕ್ಕೆ ಕನಿಷ್ಠ 2 ಲಕ್ಷ ರೂಪಾಯಿಗಳಿಂದ 3 ಲಕ್ಷ ರೂಪಾಯಿಗಳು ಬೇಕಾಗುತ್ತಿದೆ. ನಮಗೆ ಹಣವಿಲ್ಲ ವೆಂದು ಹೇಳಿಬಿಟ್ಟು, ಕುಡಿಯುವ ನೀರಿನ ಸೌಲಭ್ಯ ಸಹ ನನ್ನ ತಾಲ್ಲೂಕಿನಲ್ಲಿಲ್ಲ. ಅಂಥ ಒಂದು ದಿಕ್ಕಿನಲ್ಲಿ ಅತಿ ಸೂಕ್ಷ್ಮವಾದ ಪ್ರದೇಶದಲ್ಲಿ ಹಳದಿ ಕಾರ್ಡ್

ಆಗಿರಬಹುದು, ಕುಡಿಯುವ ನೀರಿನ ಸಮಸ್ಯೆ ಇರಬಹುದು, ಶಾಲಾ – ಕಾಲೇಜು ಮಕ್ಕಳಿಗೆ, ಅತಿ ಜನಸಂಖ್ಯೆ ಇರುವ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವಿಲ್ಲ. ಇವರೆಲ್ಲ ಸೇರಿ ನಕ್ಸಲೀಯರ ಪ್ರಭಾವಕ್ಕೆ ಒಳಗಾಗಿರುವ ನಾಡಿನಲ್ಲಿ ಏಕೆ ಇವರೆಲ್ಲ ಅಲ್ಲಿ ಪ್ರಭಾವಕ್ಕೆ ಒಳಗಾದರೆಂಬ ಪ್ರಶ್ನೆ ಜನರಲ್ಲಿ ಮಧ್ಯೆ ಕಾಡುತ್ತಿದೆ. ದಯವಿಟ್ಟು, ಸಭಾಧ್ಯಕ್ಷರೆ, ಸರ್ಕಾರಕ್ಕೆ ಸಂಕ್ಷಿಪ್ತವಾಗಿ ಕೇಳುವುದಿಷ್ಟೆ. ನನ್ನ ತಾಲೂಕಿನಲ್ಲಿ ಅತಿ ಜರೂರಾದಂಥ ಸಮಸ್ಯೆಗಳೇನಿವೆ. ಅವು ಮೂಲಭೂತ ಸೌಲಭ್ಯಗಳಿರಬಹುದು ಮತ್ತು ಇನ್ನೂ ಅನೇಕ ಸಮಸ್ಯೆಗಳಿವೆ. ಕೆಲವು ಸಮಸ್ಯೆಗಳಿಗಾದರೂ ಸಹ ಕೂಡಲೇ ಪರಿಹಾರ ಒದಗಿಸಿಕೊಡಬೇಕೆಂದು ಹೇಳಿಬಿಟ್ಟು, ಅಲ್ಲಿ ರೈತರ ಸಮಸ್ಯೆಗಳನ್ನು ಕೇಳುವಂಥ ದಿಕ್ಕಿನಲಿಲ್ಲ. ಎಲ್ಲ ತೋಟಗಳು ಸಹ ಒಣಗಿ ಹೋಗಿವೆ. ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಅವರು ಜೀವನ ಮಾಡುವುದಕ್ಕೆ ತುಂಬಾ ಕಷ್ಟವಾಗಿದೆ. ಅಲ್ಲಿ ವಿದ್ಯುಚ್ಛಕ್ತಿ ಸಮಸ್ಯೆ ತೀವ್ರವಾಗಿದೆ. ಅಂಥ ಹಲವಾರು ಸಮಸ್ಯೆಗಳಿವೆ.

ಅಧ್ಯಕ್ಷರು:– ಪ್ರಶ್ನೆ ಏನು ಕೇಳಿ.

ಶ್ರೀ ಕೆ. ಎಂ. ತಿಮ್ಮರಾಯಪ್ಪ :– ಸಂಬಂಧಪಟ್ಟ ಅಧಿಕಾರಿಗಳ್ಯಾರೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ದಯವಿಟ್ಟು ತಾವು ಈ ದಿಕ್ಕಿನಲ್ಲಿ ಆಲೋಚನೆ ಮಾಡಿ, ಸರ್ಕಾರಕ್ಕೆ ನಮ್ಮ ಸಂಬಂಧಪಟ್ಟ ಇಲಾಖಾ ಮಂತ್ರಿಗಳಿಗೆ ತಾವು ಸೂಚನೆ ಕೊಡುವುದರ ಮುಖಾಂತರ ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಡಬೇಕೆಂದು ತಮ್ಮ ಮೂಲಕ ನಾನು ಈ ಸದನದ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಈಗಾಗಲೇ ಪಾವಗಡದಲ್ಲಿ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು ಹೋಗಿ ಅಲ್ಲಿ ಕುಡಿಯುವ ನೀರಿನ ಬಗ್ಗೆ ಆಮೇಲೆ ಹಳದಿ ಕಾರ್ಡ್ ವಿತರಣೆ ಬಗ್ಗೆ ಮತ್ತು ಉಳಿದ ಅಭಿವೃದ್ಧಿ ಕೆಲಸದ ಬಗ್ಗೆಯೂ ಕೂಡ ಚರ್ಚೆ ಮಾಡಿಕೊಂಡು ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಪಾವಗಡಕ್ಕೆ ಭೇಟಿ ಕೊಡುವವರಿದ್ದಾರೆ. ಅಲ್ಲಿಂದ ಎಲ್ಲ ಸಮಸ್ಯೆಗಳ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಿ ಏನೇನು ಕ್ರಮವನ್ನು ಜರುಗಿಸಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ವಿಶೇಷವಾಗಿ ಅಭಿವೃದ್ಧಿ ಕೆಲಸಕ್ಕಾಗಿ ಏನು ಸಹಾಯ ಮಾಡಬೇಕೋ ಖಂಡಿತವಾಗಿ ಸರ್ಕಾರ ಮಾಡುತ್ತದೆ ಅನ್ನತಕ್ಕಂಥ ಮಾತನ್ನು ಮತ್ತೊಮ್ಮೆ ಈ ಸದನದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತಿದ್ದೇನೆ.

ಶ್ರೀ ಎನ್.ಎಲ್.ನರೇಂದ್ರಬಾಬು :– ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಕಿ ಅನಾಹುತವಾಯಿತು. ಅದರಲ್ಲಿ.....

ಅಧ್ಯಕ್ಷರು:– ಪ್ರಶ್ನೆ ಕೇಳಿ.